ಭೂ ಪರಿವರ್ತನೆ ಇತ್ಯಾದಿ ಕೆಲಸಗಳಿಗೆ ಯಾವುದೇ ತೊಂದರೆಯಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ:- ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಲ್ಲಿ ಗುರುತಿಸಿದ ಫಲಾನುಭವಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 527 (1182)

ಶ್ರೀ ಯು.ಆರ್.ಸಭಾಪತಿ, (ಉಡುಪಿ):- ಮಾನ್ಯ ಸಣ್ಣ ಕೈಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1995-96ರಲ್ಲಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿ ಗುರುತಿಸಿದ ವಿದ್ಯಾವಂತ ನಿರುದ್ಯೋಗಿ ಫಲಾನುಭವಿಗಳು ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) ಇದರಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳು ಸಾಲ ಸೌಲಭ್ಯ ನೀಡಿದೆ. (ತಾಲ್ಲೂಕುವಾರು ವಿವರ ನೀಡುವುದು)

ಇ) ಇಲಾಖೆ ಗುರುತಿಸಿದ ಅರ್ಹ ಫಲಾನುಭವಿಗಳಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಸೌಲಭ್ಯ ನೀಡದೆ ಇದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎ.ಮೊಯಿಯುದ್ದೀನ್ (ಸಣ್ಣ ಕೈಗಾರಿಕೆ ರಾಜ್ಯ ಸಚಿವರು):-

ಅ ಮತ್ತು ಆ) 1995-96ನೇ ಸಾಲಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ 2794 ಫಲಾನುಭವಿಗಳನ್ನು ಗುರುತಿಸಿದ್ದು, ಅದರಲ್ಲಿ 1210 ಜನ ಫಲಾನುಭವಿಗಳಿಗೆ ಬ್ಯಾಂಕುಗಳು ಸಾಲ ಮಂಜೂರು ಮಾಡಿವೆ.

ವಿವರಗಳು ಈ ಕೆಳಗಿನಂತಿದೆ:

		ಗುರುತಿಸಲ್ಪಟ್ಟ	
ಕ್ರಸಂ.	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ	ಮಂಜೂರಾತಿ ಪಡೆದ ಅಭ್ಯರ್ಥಿಗಳ ಸಂಖ್ಯೆ
1.	ಮಂಗಳೂರು	789	361
2.	ಬಂಟ್ವಾಳ	218	84
3.	ಕುಂದಾಪುರ	266	117
4.	ಕಾರ್ಕಳ	242	98
5.	ಉಡುಪಿ	795	356

6.	ಪುತ್ತೂರು	245	37
7.	ಸುಳ್ಯ	127	53
8.	ಬೆಳ್ತಂಗಡಿ	117	54
	ಒಟ್ಟು :	2794	1210

ಇ) ದಕ್ಷಿಣ ಕನ್ನಡ ಜಿಲ್ಲೆಗೆ 95-96ನೇ ಸಾಲಿನಲ್ಲಿ ಸಾಲಮಂಜೂರಾತಿಯಲ್ಲಿ 1070 ಗುರಿಯನ್ನು ನಿಗದಿಮಾಡಿದ್ದು, ಸಾಧನೆಯು 1210 ಆಗಿರುತ್ತದೆ. ಮಂಜೂರಾದ 1210 ಫಲಾನುಭವಿಗಳಲ್ಲಿ ಜೂನ್ ಅಂತ್ಯದವರೆಗೆ 768 ಫಲಾನುಭವಿಗಳಿಗೆ ರೂ.428.63 ಲಕ್ಷಗಳ ಸಾಲ ಬಿಡುಗಡೆ ಮಾಡಲಾಗಿದೆ..

ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

ಕ್ರ.ಸಂ	ತಾಲ್ಲೂಕು	ಬಿಡುಗಡೆಯಾದ ಸಾಲ	
		ಸಂಖ್ಯೆ	ಮೊತ್ತ (ಲಕ್ಷಗಳಲ್ಲಿ)
1.	ಮಂಗಳೂರು	228	124.83
2.	ಬಂಟ್ವಾಳ	53	30.00
3.	ಕುಂದಾಪುರ	74	41.80
4.	ಕಾರ್ಕಳ	62	35.00
5.	ಉಡುಪಿ	231	129.00
6.	ಪುತ್ತೂರು	55	31.00
7.	ಸುಳ್ಯ	34	19.00
8.	ಬೆಳ್ತಂಗಡಿ	31	18.00
	ಒಟ್ಟು :	768	426.63

ಉಳಿದ ಫಲಾನುಭವಿಗಳಿಗೆ ಸಾಲದ ಮೊತ್ತ ಬಿಡುಗಡೆ ಮಾಡಲು ವಿವಿಧ ಹಂತಗಳಲ್ಲಿ ಅಂದರೆ ಕೈಗಾರಿಕೆ ಇಲಾಖೆಯ ಕ್ಷೇತ್ರಾಧಿಕಾರಿಗಳು ಬ್ಯಾಂಕುಗಳಿಗೆ ಭೇಟಿ ನೀಡಿ ಬ್ಯಾಂಕು ಅಧಿಕಾರಿಗಳೊಂದಿಗೆ ಚರ್ಚಿಸಿ ಜಿಲ್ಲಾಮಟ್ಟದ ಬ್ಯಾಂಕರ್ಸ್ ಕಮಿಟಿ ಸಭೆಗಳಲ್ಲಿ ಮತ್ತು ಜಿಲ್ಲಾ ಮಟ್ಟದ ಪಿಎಂಆರ್‌ವೈ ಕಮಿಟಿ ಸಭೆಗಳಲ್ಲಿ ಹಾಗೂ ರಾಜ್ಯಮಟ್ಟದ ಪಿಎಂಆರ್‌ವೈ ಕಮಿಟಿ ಸಭೆಗಳಲ್ಲಿ ಬ್ಯಾಂಕ್ ಅಧಿಕಾರಿಗಳೊಂದಿಗೆ ಚರ್ಚಿಸಿ ಶೀಘ್ರವಾಗಿ ಹಣ ಬಿಡುಗಡೆ ಮಾಡಲು ವಾಣಿಜ್ಯ ಬ್ಯಾಂಕ್‌ಗಳನ್ನು ಕೋರಲಾಗುತ್ತಿದೆ.